

## ಹೊಸ ವಿಚಾರಗಳ 'ಐಡಿಯಾಸ್'

ಪ್ರತಿ ವರ್ಷದ ಫೆಬ್ರುವರಿ 8ನ್ನು 'ಮಹಿಳೆಯರ ಹಾಗೂ ಹುಡುಗಿಯರ ಅಂತರರಾಷ್ಟ್ರೀಯ ವಿಜ್ಞಾನ ದಿನ' ಎಂದು ಆಚರಿಸಲಾಗುತ್ತದೆ. ಆ ದಿನ, ಅಂತರರಾಷ್ಟ್ರೀಯ ಸಮಾವೇಶ ನಡೆಯುತ್ತದೆ. ದೊಡ್ಡ ಮಟ್ಟದ ಚರ್ಚೆಗಳಾಗುತ್ತವೆ. ಈ ಸಲದ 'ಇಂಟರ್‌ನ್ಯಾಷನಲ್ ಡೇ ಆಫ್ ವಿಮೆನ್ ಅಂಡ್ ಗರ್ಲ್ಸ್ ಇನ್ ಸೈನ್ಸ್' ದಿನಾಚರಣೆಯನ್ನು, 'ಐಡಿಯಾಸ್' (IDEAS – Innovate, Demonstrate, Elevate, Advance, Sustain) ಎಂಬ ಧ್ಯೇಯವಾಕ್ಯದೊಂದಿಗೆ ಆಚರಿಸಲು ನಿರ್ಧರಿಸಲಾಗಿದೆ. ವಿಶ್ವದೆಲ್ಲೆಡೆಯ ಸಂಶೋಧಕಿಯರು, ಹೋರಾಟಗಾರರು, ಸಾಮಾಜಿಕ ಸಂಸ್ಥೆಗಳ ಮುಖ್ಯಸ್ಥರು ಫೆಬ್ರುವರಿ 8ರಿಂದ 10ರವರೆಗೆ ನ್ಯೂಯಾರ್ಕ್‌ನಲ್ಲಿ ಸಭೆ ಸೇರಲಿದ್ದಾರೆ. ಇದು ಎಂಟನೆಯ ಸಮಾವೇಶವಾಗಿದ್ದು ವಿಶ್ವಸಂಸ್ಥೆ ನಿರೂಪಿಸಿರುವ ಸುಸ್ಥಿರ ಅಭಿವೃದ್ಧಿ ಗುರಿಗಳಾದ SDG6 (Clean water and sanitation), SDG7 (Affordable and clean energy)ಗಳಿಗೆ ಪ್ರಾಮುಖ್ಯ ನೀಡಿ ಕೆಲಸ ನಡೆಯುತ್ತಿದೆ. ಮೊಟ್ಟ ಮೊದಲ ಬಾರಿಗೆ ಈ ಸಮ್ಮೇಳನದಲ್ಲಿ ಕುರುಡರಿಗೆ ನೆರವಾಗುವ 'ಸೈನ್ಸ್ ಇನ್ ಬ್ರೈಲ್ – ಮೇಕಿಂಗ್ ಸೈನ್ಸ್ ಆಕ್ಸೆಸಿಬಲ್' ಎಂಬ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ದೀರ್ಘ ಗಗನಯಾನ ವಾಸ್ತವ್ಯ ಮಾಡಿ ದಾಖಲೆ ಬರೆದಿರುವ 'ನಾಸಾ'ದ ಕ್ರಿಸ್ಟಿನಾ ಕೋಚ್ ಜೊತೆಗೆ ಇನ್ನೊಬ್ಬ ಮಹಿಳಾ ಗಗನಯಾತ್ರಿ ಅನ್ನೆ ಮ್ಯಾಕ್ಲೆನ್ ಹೋಗಬೇಕೆಂದು ಮೊದಲೇ ನಿರ್ಧಾರವಾಗಿತ್ತು. ಆದರೆ ಮಹಿಳೆಗೆ ಹೊಂದುವ ಅಂತರಿಕ್ಷ ಪೋಷಾಕು ಇರಲಿಲ್ಲ ಎಂಬ ಕಾರಣ ನೀಡಿ ಆಕೆಯ ಯಾತ್ರೆಯನ್ನು ರದ್ದುಗೊಳಿಸಿ ಅವರ ಜಾಗದಲ್ಲಿ ಪುರುಷ ಗಗನಯಾತ್ರಿಯನ್ನು ಕಳುಹಿಸಿದ್ದರಿಂದ ವಿವಾದವೇ ಸೃಷ್ಟಿಯಾಗಿತ್ತು. 'ನಾಸಾ'ದಂತಹ ಸಂಸ್ಥೆಗಳು ಪುರುಷರಿಗೆ ಮಣೆ ಹಾಕುತ್ತವೆ ಎಂಬ ದೂರು ಪದೇ ಪದೇ ಕೇಳಿ ಬರುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಬಹುಪಾಲು ಕ್ಷೇತ್ರಗಳಲ್ಲಿ ಮಹಿಳೆಯರನ್ನು ವ್ಯವಸ್ಥಿತವಾಗಿ ತುಳಿಯಲಾಗುತ್ತಿದೆ ಎಂದು ಖಡಾಖಂಡಿತವಾಗಿ ಪ್ರತಿಪಾದಿಸುವ ಕರೆನ್, 'ಪುರುಷರ ಏಕಸ್ವಾಮ್ಯ ಕಡಿಮೆಯಾಗಬೇಕು' ಎಂದಿದ್ದಾರೆ.

### ಏಕೀ ತಾರತಮ್ಯ?

ಪುರುಷರಿಗೆ ಸರಿ ಸಮಾನರಾಗಿ ಸಾಧನೆ ಮಾಡಿರುವ ಮಹಿಳಾ ವಿಜ್ಞಾನಿಗಳಿಗೆ, ಸಿಗಬೇಕಾದ ಗೌರವ ಮನ್ನಣೆಗಳು ಸಿಕ್ಕಿಲ್ಲ ಎಂಬ ದೂರು



ಅಮೆರಿಕದ ಹೆಮ್ಮೆಯ ಗಗನಯಾತ್ರಿ ಕ್ರಿಸ್ಟಿನಾ ಕೋಚ್